# ಹೊನ್ನ ಪುರಾಣ; ಒಡವೆಯ ಕಥನ

**ಚಿನ್ನದೊಡವೆ ಪುರಾಣ ಕಾಲದಿಂದಲೂ ಜನಜೀವನದೊಂದಿಗೆ ತಳುಕು ಹಾಕಿಕೊಂಡಿದೆ. ರಾಮಾಯಣ, ಮಹಾಭಾರತಗಳಲ್ಲೂ ಹೊನ್ನಿನೊಡವೆಗಳ ಹೊಳಪಿದೆ. ಈ ಹೊನ್ನೆಂಬ ಮಾಯೆ, ಈಗ ಫ್ಯಾಷನ್ ಟ್ರೆಂಡ್ ಅನ್ನೇ ಸೃಷ್ಟಿಸಿದೆ.**

■ **ಕೃಷ್ಣವೇಣಿ ಪ್ರಸಾದ್ ಮುಳಿಯ**
ಚಿತ್ರಕೃಪೆ : ಮುಳಿಯ ಕೇಶವ ಭಟ್ & ಸನ್ಸ್


ರಾಮಲಲ್ಲಾ ಚೋಕರ್ ತೊಟ್ಟ ರೂಪದರ್ಶಿ ದೀಪಿಕಾ ದಿನೇಶ್

ಹೊನ್ನು, ಚಿನ್ನ, ಬಂಗಾರ, ಹೇಮ ಎಂದೆಲ್ಲ ಕರೆಸಿಕೊಳ್ಳುವ ಚಿನ್ನದ ಆಭರಣಕ್ಕೆ ಅನಾದಿ ಕಾಲದಿಂದಲೂ ಬಹುಬೇಡಿಕೆ. ಹೊನ್ನಿನಾಭರಣ ನಮ್ಮ ಆಪತ್ಬಾಂಧವ. ಕುಟುಂಬದಲ್ಲಿ ಕಷ್ಟ ಬಂದಾಗ, ಆರ್ಥಿಕ ಸಂಕಷ್ಟ ಒದಗಿಬಂದಾಗ ನಮ್ಮ ನೆರವಿಗೆ ಬರುವುದೇ ಬಂಗಾರದ ಒಡವೆಗಳು. ಈ ಬಂಗಾರದ ಆಭರಣವನ್ನು ವಿಕ್ರಯಿಸಿ ಮತ್ತೆ ನಮ್ಮ ಜೀವನವನ್ನು ರೂಪಿಸಿಕೊಳ್ಳಬಹುದು. ಮಧುರ ನೆನಪಾಗಿ ಬಂಗಾರವನ್ನು ಉಡುಗೊರೆ ನೀಡಬಹುದು, ಇದು ಶಾಶ್ವತ.

ಅಯೋಧ್ಯೆಯ ಶ್ರೀರಾಮ ಜನ್ಮಸ್ಥಾನದ ಭವ್ಯ ಮಂದಿರದ ನೆಲ ಅಂತಸ್ತಿನಲ್ಲಿರುವ ಗರ್ಭಗುಡಿಯಲ್ಲಿ 'ಶ್ರೀರಾಮಲಲ್ಲಾ (ಬಾಲರಾಮ)ನ ನೂತನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯ ದಿನ ಬಾಲರಾಮನ ಮುಗ್ಧ ನಗು, ಕಣ್ಣಿನಲ್ಲಿರುವ ಕಾಂತಿ ನಮ್ಮನ್ನು ಹರಸಲೆಂದೇ ಬಂದ ಅವತಾರ ಪುರುಷ ಶ್ರೀರಾಮ ಎಂಬ ಭಾವನೆಯಲ್ಲಿ ಶ್ರದ್ಧಾ ಭಕ್ತಿಯ ಜೊತೆಗೆ ಸಂತಸದಲ್ಲಿ ಕಣ್ತುಂಬಿದ ಕ್ಷಣದಲ್ಲಿ ಆಭರಣಗಳಲ್ಲಿ ಅತ್ಯಂತ ಆಕರ್ಷಕವಾಗಿ ಗಮನ ಸೆಳೆದದ್ದು ರಾಮಲಲ್ಲಾನ ಕೊರಳಿಗೆ ಅಂಟಿಕೊಂಡಿದ್ದ 'ಚೋಕರ್'. ದೇವರ ಸಣ್ಣ ಬಿಂಬ, ಚಿತ್ರವನ್ನು ಬಂಗಾರದಲ್ಲಿ ಮಾಡಿ ಧರಿಸಿದಾಗ, ಭಕ್ತರಾದ ಜನರಿಗೆ ನಮ್ಮೊಳಗೆ ಭಗವಂತ ಇದ್ದಾನೆ ಅನ್ನುವ ತೃಪ್ತಿ, ಆತ್ಮಸ್ಥೈರ್ಯ ಹೆಚ್ಚಾಗುತ್ತದೆ. ಜನರು ದೇವರಿಗೆ ಪ್ರಿಯವಾದ ವಸ್ತುಗಳನ್ನು ಆಭರಣವಾಗಿ, ಬೇರೆ ಬೇರೆ ರೂಪದಲ್ಲಿ ಧರಿಸಿಕೊಳ್ಳುತ್ತಾರೆ. ಎಲ್ಲವೂ ಅವರವರ ಭಕ್ತಿಯನುಸಾರ ಈ ರಾಮಲಲ್ಲಾನ ಕೆಂಪು ಹರಳಿನ ಮುತ್ತಿನ ಚೋಕರ್ ಕಣ್ಮನ ಸೆಳೆಯಿತು.

ನೂತನವಾದ ಈ ಹಾರವು ಮಹಿಳೆಯರಿಗೂ, ಯುವತಿಯರಿಗೂ ಧರಿಸುವಂತದ್ದು. ಬಹು ಸುಂದರವಾಗಿದೆ. ಜೊತೆಗೆ ರಾಮಲಲ್ಲಾನ ಚೋಕರ್‌ನ ಹೆಸರಿನಲ್ಲಿ ಧರಿಸುವಾಗ ಅದೇನೋ ಭಕ್ತಿ, ಅದೇನೋ ಸಂಭ್ರಮದಿಂದ ಪುಳಕವಾಗುವುದರಲ್ಲಿ ಸಂಶಯವಿಲ್ಲ. ಇದು ಬಹಳ ನಾಜೂಕಾಗಿದ್ದು 45 ಗ್ರಾಂ ತೂಕ ಇದ್ದು, ಕೇವಲ 3.50 ಗ್ರಾಂ ಗಳಲ್ಲಿ ಈ ಒಂದು ಚೋಕರನ್ನು

